ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಯ ಕಾಮಗಾರಿಗಳನ್ನು ಎಂದು ಪ್ರಾರಂಭಿಸಲಾಗುವುದು ಎಂದು ಕೇಳಿದ್ದರೆ ಅದಕ್ಕೆ ಟೆಂಡರ್ ಕರೆದು 18 ತಿಂಗಳಲ್ಲಿ ಮುಗಿಸುತ್ತೇವೆಂದು ಹೇಳಿದ್ದಾರೆ. ಆದರೆ ಇವರು ಟೆಂಡರ್ ಕರೆದಿಲ್ಲ, ಅಂದಮೇಲೆ ಇವರು ಮುಗಿಸುವಂಥಾದ್ದು ಯಾವಾಗ? ಟೆಂಡರ್ ಯಾವಾಗ ಕರೆಯುತ್ತಾರೆಂಬುದನ್ನು ತಿಳಿಸಬೇಕು.

ಡಾ: ಹೆಚ್.ಸಿ. ಮಹದೇವಪ್ಪ :— ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ ನೆರವಿನಡಿಯಲ್ಲಿ 201 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವಂಥಾದ್ದಕ್ಕೆ ಬೆಳಗಾಂ ವಿಭಾಗ, ಮೈಸೂರು ವಿಭಾಗ, ಬೆಂಗಳೂರು ವಿಭಾಗದಿಂದ ಒಟ್ಟು 201 ಆಸ್ಪತ್ರೆಗಳನ್ನು ತೆಗೆದುಕೊಂಡಿದ್ದೇವೆ. ಇದು ಜರ್ಮನ್ ಬ್ಯಾಂಕಿನ ನೆರವಿನ ಯೋಜನೆಯಲ್ಲಿ ಬರತಕ್ಕಂಥಾದ್ದು. ಗುಲ್ಬರ್ಗಾ ವಿಭಾಗದ 51 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವಂತಹ ಕೆಎಫ್‌ಡಬ್ಲ್ಯೂ, ಜರ್ಮನ್ ಬ್ಯಾಂಕ್‌ನ ಯೋಜನೆಯಾಗಿದೆ. ಈ ಯೋಜನೆಯ ಮಂಜೂರಾತಿ ತಡವಾಗಿ ಆಯಿತು ನಾವು ಈ ಒಪ್ಪಂದಕ್ಕೆ ಜನವರಿ 1997ರಲ್ಲಿ ಸಹಿ ಹಾಕಿದ್ದೇವೆ. ಈ ಒಪ್ಪಂದವಾಗುವ ಮೊದಲೇ ಜರ್ಮನ್ ಎಕ್ಸ್‌ಪರ್ಟ್‌ಗಳನ್ನು ಸಲಹೆಗಾರರನ್ನು ನೇಮಿಸಬೇಕಾಗಿತ್ತು. ಆದರೆ ಈ ಒಪ್ಪಂದವಾದ ಮೇಲೆ 1997ರ ಸೆಪ್ಟೆಂಬರ್ ತಿಂಗಳಲ್ಲಿ ಇವರನ್ನು ನೇಮಕಮಾಡಲಾಯಿತು. ಇವರ ನೇಮಕವಾದ ಮೇಲೆ ಎಲ್ಲಾ ಅಧಿಕಾರಗಳನ್ನು ತೆಗೆದುಕೊಂಡು ಕಾರ್ಯಗಾರವನ್ನು ನಡೆಸಿ ಮೊದಲ ಹಂತದಲ್ಲಿ 26 ಆಸ್ಪತ್ರೆಯನ್ನು ಸೇರಿಸಿದ್ದಾರೆ. ಸುಮಾರು 58 ಕೋಟಿ ರೂಪಾಯಿಗಳನ್ನು ಮೊದಲ ಹಂತದಲ್ಲಿ ಮಂಜೂರಾತಿಯಾಗಿದ್ದು, 81 ಕೋಟಿ ರೂಪಾಯಿಗಳನ್ನು 51 ಆಸ್ಪತ್ರೆಗೆ ಎಂದು ಮೊದಲ ಹಂತದಲ್ಲಿ ಇದನ್ನು ಸೇರಿಸಿದೆ. ಇದಕ್ಕೆ ಈಗಾಗಲೇ ಕರಡು ಪ್ರತಿಯೂ ಸಿದ್ಧವಾಗಿರುವುದರಿಂದ ಟೆಂಡರಿ ಕರೆದು ಮೇ ಜೂನ್ ತಿಂಗಳಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ಗುಲ್ಬರ್ಗಾ ವಿಭಾಗದಲ್ಲಿ ಮಾನ್ಯ ಮುಖ್ಯಮಂತ್ರಿಯವರು 1998ರ ಅಕ್ಟೋಬರ್ ತಿಂಗಳಲ್ಲಿ ಲಾಂಚ್ ಮಾಡಿದ್ದಾರೆ.

ಅಧ್ಯಕ್ಷರು :— ಪ್ರಶ್ನೋತ್ತರ ವೇಳೆ ಮುಗಿಯಿತು.

<u>ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.</u>

ಶ್ರೀ ಎಂ.ಸಿ ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ) :— ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳ 11ನೇ ಪಟ್ಟಿಯಲ್ಲಿರುವ 71 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮಂದೆ ಮಂಡಿಸುತ್ತೇನೆ.